ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ದೂ: 080-22297760, 22297824, 22297827

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ: ಕಾಶಿಇ/04/ಪ್ರ.ಕಾಲೇಜು/2017-18/ನ್ಯಾಕ್

ದಿನಾಂಕ: 02.05.2017.

## ಅಧಿಕೃತ ಜ್ಞಾಪನ

ವಿಷಯ: ಇಲಾಖೆಯ ಶೈಕ್ಷಣಿಕ ಕಾರ್ಯಗಳನ್ನು ಸಂಯೋಜಿಸಲು ಪ್ರವರ್ತಕ ಕಾಲೇಜುಗಳನ್ನು (Lead Colleges) ಗಳನ್ನು ಆಯ್ಕೆ ಮಾಡಿರುವ ಬಗ್ಗೆ.

* * * * * *

ಕಾಲೇಜು ಶಿಕ್ಷಣ ಇಲಾಖೆಯು ನ್ಯಾಕ್‌ನ ಸಹಯೋಗದೊಡನೆ ಉನ್ನತ ಶಿಕ್ಷಣದಲ್ಲಿ ಗುಣಮಟ್ಟದ ಕುರಿತು ಈ ಹಿಂದೆ ತಿಳುವಳಿಕೆ ಒಡಂಬಡಿಕೆ (MOU) ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಅದ'ರಂತೆ ಕಳೆದ ಹಲವಾರು ವರ್ಷಗಳಿಂದ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ತತ್ಸಂಬಂಧ ಇಲಾಖೆಯು ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು ಕಾಲೇಜನ್ನು ಪ್ರವರ್ತಕ ಕಾಲೇಜು (Lead College) ಎಂದು ಗುರುತಿಸಿದೆ.

ಪ್ರವರ್ತಕ ಕಾಲೇಜುಗಳು ಜಿಲ್ಲೆಯ ಸಮಗ್ರ ಶಿಕ್ಷಣ ಗುಣಮಟ್ಟ ನಿರ್ವಹಣೆ ಕುರಿತ ಚಟುವಟಿಕೆಗಳನ್ನು ಹಾಗು ಯುಜಿಸಿ, ನ್ಯಾಕ್, ರೂಸಾ ಹಾಗು ಇಲಾಖೆ ಆಗಿಂದಾಗ್ಗೆ ವಹಿಸುವ ಕಾರ್ಯಗಳನ್ನು ಜಿಲ್ಲಾ ಮಟ್ಟದಲ್ಲಿ ಸಂಘ'ಟಿಸಲು ಕೆಳಕಾಣಿಸಿದ 28 ಸರ್ಕಾರಿ ಪದವಿ ಕಾಲೇಜುಗಳನ್ನು ಪ್ರವರ್ತಕ ಕಾಲೇಜನ್ನಾಗಿ (Lead College) 2017-18 ನೇ ಸಾಲಿನಿಂದ 03 ವರ್ಷಗಳ ಅವಧಿಗೆ ಆಯ್ಕೆ ಮಾಡಲಾಗಿದೆ. ಇಲಾಖೆಯ ಗುಣಮಟ್ಟ ವರ್ಧನೆಯಲ್ಲಿ ನಿಮ್ಮ ಸಂಪೂರ್ಣ ಸಹಕಾರ ಹಾಗೂ ಬದ್ಧತೆಯನ್ನು ನಿರೀಕ್ಷಿಸಲಾಗಿದೆ.

| ಕ್ರ.ಸಂ | ಕಾಲೇಜಿನ ಹೆಸರು | ಆವೃತ್ತಿ | CGPA ಅಂಕ | ಗ್ರೇಡ್ | ಜಿಲ್ಲೆ |
|---|---|---|---|---|---|
| 1. | ಸರ್ಕಾರಿ ಕಲಾ ಕಾಲೇಜು, ಹಾಸನ-573 201 | 2 | 3.02 | A | ಹಾಸನ |
| 2. | ಸರ್ಕಾರಿ ಕಾಲೇಜು, ರಾಜಾಪುರ ರಸ್ತೆ, ಗುಲ್ಬರ್ಗ 585 105 | 2 | 3.01 | A | ಕಲಬುರಗಿ |
| 3. | ಸರ್ಕಾರಿ ಬಾಲಕಿಯರ ಕಾಲೇಜು, ಕೋಲಾರ - 563 101 | 2 | 2.08 | B | ಕೋಲಾರ |
| 4. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉಡುಪಿ-576 101 | 2 | 2.61 | B | ಉಡುಪಿ |
| 5. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ - 577 004 | 2 | 2.64 | B | ದಾವಣಗೆರೆ |
| 6. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಥಬೀದಿ, ಮಂಗಳೂರು-575001 | 1 | 2.28 | B | ಮಂಗಳೂರು |
| 7. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಾಂಧಿ ಚೌಕ, ಬಿಜಾಪುರ-586101 | 1 | 2.45 | B | ಬಿಜಾಪುರ |
| 8. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ-571 511. | 2 | 2.02 | B | ರಾಮನಗರ |
| 9. | ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ-577 501 | 3 | 2.71 | B | ಚಿತ್ರದುರ್ಗ |
| 10. | ಮಹಾರಾಣಿ ಸರ್ಕಾರಿ ಮಹಿಳಾ ಕಲಾ ಕಾಲೇಜು ಮೈಸೂರು, 570 005 | 3 | 2.67 | B | ಮೈಸೂರು |

| | | | | | |
|---|---|---|---|---|---|
| 11. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಶಿವಮೊಗ್ಗ-577 201 | 1 | 2.42 | B | ಶಿವಮೊಗ್ಗ |
| 12. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ | 1 | 2.12 | B | ಕೊಪ್ಪಳ |
| 13. | ಸರ್ಕಾರಿ ಕಲಾ ಕಾಲೇಜು, ಬೆಂಗಳೂರು - 560001 | 3 | 2.76 | B++ | ಬೆಂಗಳೂರು |
| 14. | ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು - 560 001. | 3 | 3.54 | A+ | ಬೆಂಗಳೂರು |
| 15. | ಸರ್ಕಾರಿ ಬಾಲಕರ ಕಾಲೇಜು, ಮಂಡ್ಯ-571401 | 3 | 3.21 | A | ಮಂಡ್ಯ |
| 16. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ-585 401 | 2 | 3.01 | A | ಬೀದರ್ |
| 17. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾರವಾರ - 581 301 | 3 | 3.03 | A | ಉತ್ತರ ಕನ್ನಡ |
| 18. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ-581110 | 1 | 2.1 | B | ಹಾವೇರಿ |
| 19. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ-580001 | 1 | 2.09 | B | ಧಾರವಾಡ |
| 20. | ಶ್ರೀಮತಿ ಸರಳಾದೇವಿ ಸತೀಶ್ ಚಂದ್ರ ಅಗರವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ - 583 101 | ನ್ಯಾಕ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ | | | |
| 21. | ಐ .ಡಿ .ಎಸ್.ಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಮಗಳೂರು - 577 102 | | | | |
| 22. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಎಂ.ಜಿ.ರಸ್ತೆ ಚಿಕ್ಕಬಳ್ಳಾಪುರ - 562 101 | | | | |
| 23. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ, ಯಾದಗಿರಿ ಜಿಲ್ಲೆ - 585 202 | | | | |
| 24. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಡಿಕೇರಿ-571201 | | | | |
| 25. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗದಗ್ -582201 | | | | |
| 26. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಗಲಕೋಟೆ | | | | |
| 27. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು-584101 | | | | |
| 28. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು | | | | |

## ***ಲೀಡ್ ಕಾಲೇಜುಗಳ ಪಾತ್ರ***

ಪ್ರತಿ ಜಿಲ್ಲೆಗೂ ಒಂದು ಲೀಡ್ ಕಾಲೇಜನ್ನು ಗುರುತಿಸಲಾಗುತ್ತದೆ . ನ್ಯಾಕ್ ಮಾನ್ಯತೆ ಪಡೆದ ಜಿಲ್ಲಾ ಕೇಂದ್ರದಲ್ಲಿರುವ ಕಾಲೇಜು ಆಯಾ ಜಿಲ್ಲೆಯ ಲೀಡ್ ಕಾಲೇಜಾಗಿರುತ್ತದೆ. ಈ ಕಾಲೇಜುಗಳು ಜಿಲ್ಲೆಯಲ್ಲಿ ನಡೆಯುವ ವಿವಿಧ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ತರಬೇತಿ ಮತ್ತು ಫೆಸಿಲಿಟೇಷನ್ ಕೇಂದ್ರವಾಗಿರುತ್ತದೆ. ಲೀಡ್ ಕಾಲೇಜು ನಡೆಸಬೇಕಾದ ಕಾರ್ಯಗಳ ವಿವರಗಳು ಕೆಳಗಿನಂತಿವೆ:

- ✓ ಲೀಡ್ ಕಾಲೇಜು ಮೂರು ವರ್ಷಗಳ ಅವಧಿಗೆ ಲೀಡ್ ಕಾಲೇಜಾಗಿ ಕಾರ್ಯ ನಿರ್ವಹಿಸುತ್ತದೆ. ನಂತರದ ಅವಧಿಗೂ ಲೀಡ್ ಕಾಲೇಜಾಗಿ ಮುಂದುವರಿಯುವುದಕ್ಕಾಗಿ ಮರುನಾಮಕರಣಗೊಳ್ಳಲು ಲೀಡ್ ಕಾಲೇಜು ಅರ್ಹವಾಗಿರುತ್ತದೆ.
- ✓ ಜಿಲ್ಲೆಯಲ್ಲಿರುವ ಇತರೆ ಶೈಕ್ಷಣಿಕ ಸಂಸ್ಥೆಗಳಿಗೆ ಲೀಡ್ ಕಾಲೇಜು ಒಂದು ಸೇವಾಕೇಂದ್ರವಾಗಿರುತ್ತದೆ.
- ✓ ಇಲಾಖೆಗೆ ಸಂಬಂಧಪಟ್ಟ ವಿವಿಧ ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿ ಹಾಗು NAAC, UGC, RUSA ಇವೇ ಮೊದಲಾದ ಯೋಜನೆಗಳಿಗೆ ಸಂಬಂಧಪಟ್ಟ ವಿವಿಧ ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ತನ್ನ ಮೂಲಭೂತ ಸೌಕರ್ಯಗಳನ್ನು ಲೀಡ್ ಕಾಲೇಜು ಒದಗಿಸಬೇಕು .
- ✓ ಪ್ರಾಂಶುಪಾಲರ ಸಭೆಗಳು, ಅಧ್ಯಾಪಕರು, ವಿದ್ಯಾರ್ಥಿಗಳು, ಪೋಷಕರು, ಆಡಳಿತ ಮಂಡಳಿಯ ಪ್ರತಿನಿಧಿಗಳು ಅಥವಾ ಆಡಳಿತ ಸಿಬ್ಬಂದಿಗೆ ಒಂದು ದಿನದಿಂದ ಮೂರು ದಿನಗಳವರೆಗಿನ ಅವಧಿಯ

ತರಬೇತಿ ಕಾರ್ಯಕ್ರಮಗಳು, ಇವೇ ಮೊದಲಾದ ಚಟುವಟಿಕೆಗಳನ್ನು ಲೀಡ್ ಕಾಲೇಜಿನಲ್ಲಿ ಆಯೋಜಿಸಬೇಕಾಗುತ್ತದೆ.

- ✓ ಪ್ರಾಂಶುಪಾಲರು ಅಥವಾ ನಾಮಾಂಕಿತ ವ್ಯಕ್ತಿಗಳು ಈ ಕಾರ್ಯಕ್ರಮಗಳ ಸಂಘಟಕರಾಗಿರುತ್ತಾರೆ. ಜಿಲ್ಲಾ ಲೀಡ್ ಕಾಲೇಜು, ಜಿಲ್ಲೆಯಲ್ಲಿ ಚಟುವಟಿಕೆಗಳನ್ನು ಆಯೋಜಿಸುವ ಸಂಘಟಕರ ಕಾರ್ಯವನ್ನು ನಿರ್ವಹಿಸುವುದಕ್ಕಾಗಿ ಅಧ್ಯಾಪಕರ ಸಣ್ಣ ಸಮಿತಿಯೊಂದನ್ನು ರಚಿಸಬೇಕು.
- ✓ ಸಭೆಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಲೀಡ್ ಕಾಲೇಜು ತನ್ನ ಸಭಾಂಗಣ, ಸೆಮಿನಾರ್ ಹಾಲ್ ಅಥವಾ ತರಗತಿ ಕೊಠಡಿಗಳನ್ನು ಒದಗಿಸಬೇಕು.
- ✓ ಅಗತ್ಯವಿದ್ದಲ್ಲಿ, ಸಭೆ ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಬರುವವರಿಗೆ ವಿದ್ಯಾರ್ಥಿನಿಲಯಗಳಲ್ಲಿ ವಸತಿ ಸೌಕರ್ಯವನ್ನು ಸಹ ಒದಗಿಸಬೇಕು.
- ✓ ಲೀಡ್ ಕಾಲೇಜು ಕಾರ್ಯಕ್ರಮಗಳನ್ನು ಆಯೋಜಿಸಲು ಮತ್ತು ಇಲಾಖೆ ಅಥವಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರೇ ಸ್ವತಃ ವೆಚ್ಚವನ್ನು ಪಾವತಿಸುವಂತಿದ್ದಲ್ಲಿ, ಭಾಗವಹಿಸಲು ಬರುವವರಿಗೆ ಊಟ, ಲೇಖನಸಾಮಗ್ರಿಗಳನ್ನು ಒದಗಿಸಲು ಇಚ್ಛೆ ಹೊಂದಿರಬೇಕು.
- ✓ ಎಲ್ಲಕ್ಕಿಂತ ಮಿಗಿಲಾಗಿ ಲೀಡ್ ಕಾಲೇಜು ಸ್ವತಃ ಗುಣಮಟ್ಟವನ್ನು ಹೊಂದಿರುವ ಕಾರಣ, ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವ ವಿಷಯದಲ್ಲಿ ಇತರ ಸಂಸ್ಥೆಗಳಿಗೆ ಬೆಂಬಲ ನೀಡುವ ಮಾದರಿ ಕಾಲೇಜಾಗಿರಬೇಕು.
- ✓ ನಾಗರಿಕ ಸೇವಾ ಪರೀಕ್ಷೆಗಳನ್ನು (Civil Service Examinations) ತೆಗೆದುಕೊಂಡು ಆಡಳಿತಾತ್ಮಕ ಸೇವೆಗಳಿಗೆ ನೇಮಕಾತಿ ಹೊಂದಲು ಬಯಸುವ ಜಿಲ್ಲೆಯಲ್ಲಿನ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಲೀಡ್ ಕಾಲೇಜುಗಳು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಬೇಕು.

*"ಮಾನ್ಯ ಆಯುಕ್ತರಿಂದ ಟಿಪ್ಪಣಿ ಅನುಮೋದಿಸಲ್ಪಟ್ಟಿದೆ"*

Sulpan
ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)

ಇವರಿಗೆ:

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ–ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಪ್ರವರ್ತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

ಪ್ರತಿ ಆಂತರಿಕ:

1. ಆಯುಕ್ತರು, ನಿರ್ದೇಶಕರು, ಮುಖ್ಯ ಆಡಳಿತಾಧಿಕಾರಿಗಳು, ಹೆಚ್ಚುವರಿ ನಿರ್ದೇಶಕರ ಆಪ್ತ ಸಹಾಯಕರುಗಳು, ಮಾಹಿತಿಗಾಗಿ.
2. ಸಮನ್ವಯಾಧಿಕಾರಿಗಳು– ರಾಜ್ಯ ಗುಣಮಟ್ಟ ಭರವಸಾ ಕೋಶ, ಕೇಂದ್ರ ಕಛೇರಿ, ಬೆಂಗಳೂರು– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಕಛೇರಿ ಪ್ರತಿ.